**ಪಾಠ–12** **ಜೂನ್ 15–21**

# ಅವರು ನಿನ್ನ ಮನೆಯಲ್ಲಿ ಏನು ನೋಡಿದರು?



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಯೆಶಾಯ 38:39; 1 ಕೊರಿಂಥ 7:12–15 ಮತ್ತು 1 ಪೇತ್ರ 3:1,2, ಇಬ್ರಿಯ 6:12, ಇಬ್ರಿಯ 13:17 ಮತ್ತು 3 ಯೋಹಾನ 11, ಯೆಶಾಯ 58:6,7,10,12.

ಸ್ಮರಣವಾಕ್ಯ : ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನರೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ (1 ಪೇತ್ರ 2:9).

ಬಹುಶಃ ನಾವು ಕರ್ತನಿಗೆ ಕೃತಜ್ಞತೆಗಳನ್ನು ಸಲ್ಲಿಸುವ ಮಟ್ಟವನ್ನು ತಲುಪಿದ್ದೇವೆ, ನಮ್ಮ ಜೀವನವು ಚೆನ್ನಾಗಿ ನಡೆಯುತ್ತಿದೆ (ಕೊನೆ ಪಕ್ಷ ಈವಾಗ) : ಕುಟುಂಬ ಚೆನ್ನಾಗಿದೆ, ಕೆಲಸ ಚೆನ್ನಾಗಿದೆ, ಆರೋಗ್ಯ ಮತ್ತು ಹಣಕಾಸಿನ ಸ್ಥಿತಿಯು ಚೆನ್ನಾಗಿದೆ ಅಥವಾ ಯಾವುದೂ ಚೆನಾಗಿಲ್ಲದಿರಬಹುದೆ? ಈವಾಗ ನಮ್ಮ ಮನೆಯಲ್ಲಿ ದುಃಖ ದುಮ್ಮಾನವಿರಬಹುದೆ? ಎರಡರಲ್ಲಿ ಯಾವ ರೀತಿಯಲ್ಲಾದರೂ ಇರಬಹುದು, ಬ್ಯಾಬಲೋನಿನಿಂದ ರಾಯಭಾರಿಗಳು ಹಿಜ್ಕೀಯನ ಅರಮನೆಗೆ ಬಂದಂತೆ ಯಾರಾದರೂ ಸಂದರ್ಶಕರು ನಿಮ್ಮ ಮನೆಗೆ ಬಂದಾಗ "ಬ್ಯಾಬಿಲೋನಿನವರು ನಿನ್ನ ಅರಮನೆಯಲ್ಲಿ ಏನು ನೋಡಿದರು?" ಎಂದು ಯೆಶಾಯನು ಕೇಳಿದಂತೆ ನಮ್ಮನ್ನು ಕೇಳಿದರೆ ನೀವು ಏನು ಉತ್ತರ ಕೊಡುವಿರಿ? (ಯೆಶಾಯ 39:4).

ಜನರು ನಿಮ್ಮ ಮನೆಯಲ್ಲಿ ಏನನ್ನು ನೋಡಿದರು? ಪರಲೋಕದ ದೂತರು ಏನು ನೋಡಿದರು? ನಿಮ್ಮ ಮನೆಯಲ್ಲಿ ಯಾವ ತರಹದ ಹುರುಪು ವ್ಯಾಪಿಸಿಕೊಂಡಿದೆ (ಹರಡಿದೆ)? ನಿಮ್ಮ ಮನೆಯಲ್ಲಿ ಪ್ರಾರ್ಥನೆಯೆಂಬ ಸುಗಂಧದ ವಾಸನೆ ತುಂಬಿದೆಯೇ? ದಯೆ, ಉದಾರತೆ, ಪ್ರೀತಿ ಅಥವಾ ಒತ್ತಡ (ಉದ್ವೇಗ), ಕೋಪ, ಅಸಮಾಧಾನ, ಕಹಿಭಾವನೆ ಮತ್ತು ವೈಮನಸ್ಸುಗಳಿಂದ ತುಂಬಿರಬಹುದೆ? ನಿಮ್ಮ ಮನೆಗೆ ಯಾರಾದರೂ ಭೇಟಿಕೊಟ್ಟಾಗ ಮನೆಯಲ್ಲಿ ಯೇಸುಕ್ರಿಸ್ತನು ಇದ್ದಾನೆಂದು ಅವರು ಅಂದುಕೊಳ್ಳುತ್ತಾರೆಯೇ? ನಾವು ಎಂತಹ ಮನೆಯನ್ನು (ಕುಟುಂಬವನ್ನು) ನಿರ್ಮಾಣ ಮಾಡಿದ್ದೇವೆ ಎಂಬುದನ್ನು ನಮ್ಮನ್ನೇ ನಾವು ಕೇಳಿಕೊಳ್ಳುವಂತಹ ಮುಖ್ಯಪ್ರಶ್ನೆಗಳಾಗಿವೆ. ಈ ವಾರ ಅನಿವಾರ್ಯವಾಗಿ ಇಂದು ನಮ್ಮ ಕುಟುಂಬಗಳಲ್ಲಿ ದುಗುಡ ಹೋರಾಟಗಳನ್ನು ಎದುರಿಸುತ್ತಿದ್ದಾಗ್ಯೂ ನಾವು ನಮ್ಮ ಕುಟುಂಬದ ಜೀವನವನ್ನು ಅದ್ಭುತಪಡಿಸುವ ಕೆಲವು ಪ್ರಕರಣಗಳನ್ನು ನೋಡುತ್ತೇವೆ.

ಈ ವಾರದ ಪಾಠಗಳನ್ನು ಜೂನ್ 22ರ ಸಬ್ಬತ್ತಿಗಾಗಿ ಸಿದ್ಧಪಡಿಸಿಕೊಳ್ಳಿರಿ.

**ಭಾನುವಾರ** **ಜೂನ್ 16**

## ರಾಜನ ತಪ್ಪಿನಿಂದ ಕಲಿಯಬೇಕಾದುದು

ಹಿಜ್ಕೀಯನು ರೋಗದಿಂದ ಗುಣಹೊಂದಿದಾಗ ಬಾಬೆಲಿನಿಂದ ದೂತರು ಬಂದ ಕಥೆಯನ್ನು ಓದಿರಿ. 2 ಪೂರ್ವ 32:25–31, ಯೆಶಾಯ 38ನೇ, 39ನೇ ಅಧ್ಯಾಯಗಳು.

ಬಾಬಿಲೋನಿನಿಂದ ಬಂದ ರಾಯಭಾರಿಗಳು (ರಾಜದೂತರು) ರಾಜನಾದ ಹಿಜ್ಕೀಯನು ಅದ್ಭುತವಾಗಿ ಸ್ವಸ್ಥನಾದ ವಿಷಯದಲ್ಲಿ ಆಸಕ್ತಿಯುಳ್ಳವರಾಗಿದ್ದರೆಂದು ಸತ್ಯವೇದವು ತಿಳಿಸುತ್ತದೆ. ಹಿಜ್ಕೀಯನಾದರೂ ಮಾತಾಡಲಿಲ್ಲ. ರಾಜನು ತನ್ನನ್ನು ವಿಚಾರಿಸಿದ ರಾಯಭಾರಿಗಳಿಗೆ ಹೃದಯಗಳನ್ನು ನಿಜವಾದ ದೇವರ ಅರಿವಿನ ಕಡೆಗೆ ತೆರೆಸುವಂಥ ವಿಷಯಗಳಿಗೆ ಒತ್ತುಕೊಡಲಿಲ್ಲ. ಹಿಜ್ಕೀಯನು ತನಗಾದ ಸ್ವಸ್ಥತೆಗೆ 38ನೇ ಅಧ್ಯಾಯದಲ್ಲಿ ದೇವರಿಗೆ ಕೃತಜ್ಞನಾಗಿ 39ನೇ ಅಧ್ಯಾಯದಲ್ಲಿ ಮೌನಿಯಾದದು ಬೆರಗುಗೊಳಿಸುವಂಥ ವೈದೃಶ್ಯ (ಭಿನ್ನತೆ)ವಾಗಿದೆ. ದೇವರು

ರಾಜನನ್ನು ಶೋಧಿಸಲ್ಪಡುವುದಕ್ಕೆ ಬಿಟ್ಟನು. ರಾಯಭಾರಿಗಳ ಸಂದರ್ಶನವು ಅತ್ಯಂತ ಮಹತ್ವವುಳ್ಳದಾಗಿತ್ತು. ಆದಾಗ್ಯೂ ಅರಸನಾದ ಹಿಜ್ಕೀಯನು ತನಗೆ ವಿಶೇಷವಾದ ಮಾರ್ಗದರ್ಶನವು ಪ್ರವಾದಿಗಳಿಂದಾಗಲೀ ಯಾಜಕರಿಂದಾಗಲೀ ಆಗುವಂತೆ ಪ್ರಾರ್ಥಿಸಲಿಲ್ಲ. ದೇವರು ಸಹ ಮಧ್ಯ ಬರಲಿಲ್ಲ. ಹಿಜ್ಕೀಯನು ಆತ್ಮೀಕ ಸಲಹೆಗಾರರ ಅಭಿಪ್ರಾಯವನ್ನು ತೆಗೆದುಕೊಳ್ಳದೆ ದೇವರ ಕೆಲಸವು ಅವನ ಜೀವಿತಾವಧಿಯಲ್ಲಿ ಹಿಂಜರಿಯುವಂತೆ ಪ್ರಜೆಗಳಿಗೂ ಗೊತ್ತಾಗದ ಹಾಗೆ ತಾನೊಬ್ಬನೇ ವ್ಯವಹರಿಸಿದುದು ಹೊರನೋಟಕ್ಕೆ ಗೊತ್ತಾಗುತ್ತದೆ. ಎರಡನೇ ಪೂರ್ವಕಾಲ ವೃತ್ತಾಂತದಲ್ಲಿ ದೇವರ ಆಶೀರ್ವಾದಗಳನ್ನು ಹಗುರವಾಗಿ ಕಾಣುವುದರಿಂದ ಆತನ ಕರುಣೆ ಹೊಂದಿದವರು ಆತನನ್ನು ಆತುಕೊಳ್ಳದೆ ಹೋಗುವುದರಿಂದ ಎಂಥಾ ಅಪಾಯವಿದೆ ಎಂಬುದನ್ನು ತೋರಿಸಿಕೊಡುವುದು ಚರಿತ್ರೆಕಾರನ ಇಂಗಿತವಾಗಿದೆ. ತನ್ನ ವೈಯಕ್ತಿಕ ಜೀವನದಲ್ಲಿ ಹಿಜ್ಕೀಯನು ಹೇಗೆ ನಂಬಿಗಸ್ತನಾದನು ಎಂಬುದರ ಬಗ್ಗೆ ಕೆಲವು ಪಾಠಗಳಿವೆ. ಇತರರು ಇದರ ಬಗ್ಗೆ ಏನನ್ನು ಆಲೋಚಿಸುತ್ತಾರೆ?

ಜನರು ಕ್ರೈಸ್ತರ ಮನೆಗಳನ್ನು ಸಂದರ್ಶಿಸುವಾಗ ಕ್ರಿಸ್ತನನ್ನು ಅನುಸರಿಸುವವರನ್ನು ಭೇಟಿಯಾಗುವ ಸದಾವಕಾಶವಿರುತ್ತದೆ. ಕೆಲವು ಸಂದರ್ಶಕರು ತಮ್ಮ ಸಂವಾದವನ್ನು ಆತ್ಮೀಕ ವಿಷಯಗಳ ಬಗ್ಗೆ ಮಾಡಬಹುದು. ಕ್ರೈಸ್ತರ ಇಂತಹ ಸಂದರ್ಭಗಳನ್ನು ಶುಭಸಂದೇಶವನ್ನು ಅವರೊಡನೆ ಹಂಚಿಕೊಳ್ಳುವುದಕ್ಕೆ ಸಮರ್ಪಕವಾದ ವಿಧಾನಗಳನ್ನು ಕಂಡುಕೊಳ್ಳಬೇಕು. ಕ್ರೈಸ್ತರು ತಮ್ಮ ಲೌಕಿಕ ಏಳಿಗೆಗಳನ್ನು ಮತ್ತು ಸಾಧನೆಗಳನ್ನು ದೇವರಿಂದ ಬಂದ ಆಶೀರ್ವಾದಗಳಂತಲೇ ಪರಿಗಣಿಸಿರಬಹುದು. ಆದರೆ ಇವುಗಳನ್ನು ಪ್ರದರ್ಶಿಸುವುದಕ್ಕೋಸ್ಕರ ಅವರು ದೇವರಿಂದ ಕರೆಯಲ್ಪಟ್ಟಿಲ್ಲ. "ನಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ" (1 ಪೇತ್ರ 2:9) ಆಯಲ್ಪಟ್ಟಿದ್ದೇವೆ ಅಥವಾ "ಅವರು ಸಾಯುತ್ತಿದ್ದರು ಆದರೆ ಕ್ರಿಸ್ತನು ವಾಸಿ ಮಾಡಿದನು" ಎಂದು ಸಾಂಕೇತಿಕವಾಗಿ ಹೇಳಲು ಹಿಜ್ಕೀಯನ ಅನುಭವಗಳನ್ನು ಬಳಸುತ್ತೇವೆ. ನಮ್ಮ ಮೇಲೆ ಮಹಾ

ಪ್ರೀತಿಯನ್ನಿಟ್ಟು ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು. ಕೃಪೆಯಿಂದಲೇ ರಕ್ಷಣೆ ಹೊಂದಿದ್ದೇವೆ (ಎಫೆಸ 2:4–6).

ನಮ್ಮ ಮನೆಗಳು ಇತರರಿಗೆ ಕ್ರಿಸನ ಬಗ್ಗೆ ಸಾಕ್ಷಿಯಾಗಿರುವುದಕ್ಕೆ ಯಾವ ವಿಧಾನಗಳನ್ನು ನಾವು ಉಪಯೋಗಿಸಬಹುದು?

ಕ್ರಿಸ್ತನ ನಂಬಿಕೆಯನ್ನು ನೀವು ನಿಮ್ಮ ಮನೆಗೆ ಬಂದವರ ಜೊತೆಗೆ ಹೇಗೆ ಹಂಚಿಕೊಳ್ಳುವಿರಿ?

**ಸೋಮವಾರ** **ಜೂನ್ 17**

## ಕುಟುಂಬ ಮೊದಲು

ನಾವು ಸುವಾರ್ತೆಯನ್ನು ಹಂಚಿಕೊಳ್ಳುವ ಸಾಹಸದಲ್ಲಿ ನಮ್ಮ ಕುಟುಂಬದವರು ಸ್ವಾಭಾವಿಕವಾಗಿ ಅದನ್ನು ಮೊದಲ ನಮ್ಮಿಂದ ಪಡೆಯುತ್ತಾರೆ. ಮನೆಗಿಂತ ಉತ್ತಮವಾದ ಸುವಾರ್ತಾ ಕ್ಷೇತ್ರವು ಮತ್ತೊಂದಿರುವುದಿಲ್ಲ.

ನಾವು ನಮ್ಮ ನಂಬಿಕೆಯನ್ನು ಮನೆಯವರೊಂದಿಗೆ ಹಂಚಿಕೊಳ್ಳುವಾಗ ಯೋಹಾನ 1:40–42 ವಚನಗಳಿಂದ ಯಾವ ಇತ್ಯರ್ಥಕ್ಕೆ ಬರುತ್ತೇವೆ?

ಧರ್ಮೋಪ 6:6,7 ಮತ್ತು ರೂತಳು 1:14–18ನೇ ವಚನಗಳನ್ನು ನೋಡಿರಿ.

ಕ್ರಿಸ್ತನನ್ನು ಕಂಡುಕೊಂಡ ಆಂದ್ರೇಯನು ಅದನ್ನು ಮತ್ತೊಬ್ಬರಿಗೆ ಕೇವಲ "ವರದಿ" ಮಾಡುವುದರಲ್ಲಿ ಉತ್ಸಾಹಿಯಾಗಿರದೆ ತನ್ನ ಅಣ್ಣನಾದ ಪೇತ್ರನು ಯೇಸುವನ್ನು ಕಂಡುಕೊಳ್ಳುವುದಕ್ಕೆ ಸಹಾಯ ಮಾಡಿದನು. ಉತ್ಸಾಹದಿಂದ ಕೂಡಿದ ವರದಿ ಮತ್ತು ವ್ಯಕ್ತಿಯಾಗಿ ಆತನನ್ನು ಪರಿಚಯಿಸುವುದು ಸುವಾರ್ತೆಯನ್ನು ನಮ್ಮ ಕುಟುಂಬದವರೊಟ್ಟಿಗೆ ಹಂಚುವುದು ಎಂಥಾ ಸುಲಭವಾದ ಸೂತ್ರವಾಗಿದೆ! ತನ್ನ ಅಣ್ಣ ಪೇತ್ರನನ್ನು ಕ್ರಿಸ್ತನಿಗೆ ಪರಿಚಯಿಸಿದೆ ಮೇಲೆ ತಾನು ಹಿಂದೆ ಸರಿದುಕೊಂಡನು. ನಂತರ ಯೇಸು ಮತ್ತು ಪೇತ್ರ ಈರ್ವರು ಒಳ್ಳೆಯ ಸಂಬಂಧ ಹೊಂದಿದ್ದರು.

ನಂಬಿಕೆಯ ಸ್ಥಳಕ್ಕೆ ಮಕ್ಕಳನ್ನು ಕಳಿಸುವುದಕ್ಕೆ ಸಹಾಯ ಮಾಡುವುದು. ಮನೆಯಲ್ಲಿರುವ ಮಕ್ಕಳು ಸುವಾರ್ತೆಯನ್ನು ಹಂಚಿಕೊಳ್ಳುವದಕ್ಕೆ ಯೋಗ್ಯರಲ್ಲ

ಎಂದು ಬಹಳ ಸಲ ಅದರನ್ನು ತಿರಸ್ಕರಿಸುತ್ತೇವೆ. ಮಕ್ಕಳು ಮನೆಯಲ್ಲಿರುವ ಆತ್ಮೀಕ ವಾತಾವರಣವನ್ನು ಗ್ರಹಿಸಿಕೊಳ್ಳುತ್ತಾರೆಂದು ತಂದೆ ತಾಯಿಗಳು ತಪ್ಪಾಗಿ ಪರಿಭಾವಿಸುತ್ತಾರೆ. ಇದನ್ನು ನಾವು ಹೀಗೆ ಪರಿಭಾವಿಸಿಕೊಳ್ಳಬಾರದು. ಮಕ್ಕಳು ಯೌವನಸ್ಥರು ನಮ್ಮ ಮಾದರಿಯನ್ನು ನೋಡಿ ಕಲಿಯುತ್ತಾರಾದರೂ ಅವರಿಗೆ ವೈಯಕ್ತಿಕವಾಗಿ ಗಮನವನ್ನು ಕೊಟ್ಟು ಅವರನ್ನು ಕ್ರಿಸ್ತನಿಗೆ ಪರಿಚಯಿಸುವುದು ಬಹಳ ಮುಖ್ಯವಾಗಿದೆ. ಧರ್ಮೋಪದೇಶಕಾಂಡ ಈ ವಿಷಯವನ್ನು ತಿಳಿಸುತ್ತದೆ. ಮಕ್ಕಳಿಗೆ ಅತ್ಯುತ್ತಮವಾದ ಪಾರಮಾರ್ಥಿಕ ಶಿಕ್ಷಣವನ್ನು ಕೊಡುವುದಕ್ಕೆ ನಾವು ಹೆಚ್ಚಿನ ಗಮನ ಹರಿಸಬೇಕು.

ವೈಯಕ್ತಿಕ ಮತ್ತು ಕೌಟುಂಬಿಕ ಆರಾಧನೆ ಕ್ರಮವಾಗಿ ನಡೆಯುವಂತೆ ಪ್ರೋತ್ಸಾಹಿಸಬೇಕು. ನಮ್ಮ ಮಕ್ಕಳು ಮತ್ತು ಯೌವನಸ್ಥರ ಸಲುವಾಗಿ ನಮ್ಮ ಸಮಯ ಮತ್ತು ಪ್ರಾಮಾಣಿಕ ಪರಿಶ್ರಮಗಳನ್ನು ಉಪಯೋಗಿಸುವವರಾಗಿರಬೇಕು.

ನವೋಮಿಯ ಸುವಾರ್ತಾ ಪರಿಶ್ರಮಗಳಿಂದ ನಾವೇನು ಕಲಿಯಬಹುದು?

ನವೋಮಿಯು ಅತ್ಯಂತ ತಳದಲ್ಲಿರುವ ಸನ್ನಿವೇಶವನ್ನು ರೂತಳು ನೋಡುತ್ತಾಳೆ. ನವೋಮಿಯು ಖಿನ್ನತೆಯಿಂದ ಕೋಪದಿಂದ ತನ್ನ ಸೊಸೆಯರನ್ನು ದೂರ ಮಾಡುವ ಸಂದರ್ಭದಲ್ಲಿ ತನಗೆ ಸಂಭವಿಸಿದ ನಷ್ಟಗಳಿಗೆ ದೇವರ ವಿರುದ್ಧವಾಗಿ ಮಾತಾಡುತ್ತಾಳೆ (ರೂತ 1:15, 20, 21). ಪರಿಪೂರ್ಣನಾದ ದೇವರಿಗೆ ಯೌವನಸ್ಥರು ಬದ್ಧರಾಗಿರಬಹುದು ಎಂಬುದಕ್ಕೆ ರೂತಳಿಗಿಂತ ಹೆಚ್ಚಿನ ಸಾಕ್ಷಿಯು ಬೇರೊಂದಿಲ್ಲ (ದೇವರು ರೂತಳನ್ನು ಪರಿಚಯಿಸಿಕೊಟ್ಟ ನವೋಮಿಯು ಬಲಹೀನಳಾಗಿದ್ದಾಳೆಂಬುದನ್ನು ಮರೆಯಬಾರದು).

ಮನೆಯೆಂಬುದು ನಿಮ್ಮ ಸುವಾರ್ತೆಯ ಕೆಲಸಕ್ಕೆ ಮುಖ್ಯವಾದ ಕಾರ್ಯಕ್ಷೇತ್ರವಾಗಿದ್ದು ಅಲ್ಲಿ ನಮ್ಮೊಂದಿಗೆ ಜೀವಿಸುವವರ ಮೇಲೆ ನೀವು ತೋರುವ ಧೋರಣೆಯ ಬಗ್ಗೆ ಹೇಗೆ ಪರಿಣಾಮ ಬೀರುತ್ತದೆ?

ರಕ್ಷಣೆ ಪಡೆದಿಲ್ಲದವರನ್ನು ಕ್ರಿಸ್ತನ ಸಂಬಂಧಿಗಳನ್ನಾಗಿಸಲು ಅಗತ್ಯವಾದ ನಿರ್ದಿಷ್ಟ ಪ್ರಯತ್ನಗಳ ಪಟ್ಟಿಯನ್ನು ಕುಟುಂಬದವರೊಟ್ಟಿಗೆ ತಯಾರಿಸಿರಿ.

ಮಂಗಳವಾರ ಜೂನ್ 18

## ಗೆಲ್ಲುವಂಥ ಸಮಾಧಾನ

ಗಂಡ ಹೆಂಡತಿಯರ ಧರ್ಮಗಳು ವ್ಯತ್ಯಾಸವಾಗಿರುವ ನಿಮಿತ್ತ ಮುರಿದು ಹೋಗಿರುವ ವಿವಾಹ ಸಂಬಂಧಗಳ ಬಗ್ಗೆ ಹೊಸ ಒಡಂಬಡಿಕೆ ಎಂಥಾ ಸಲಹೆಯನ್ನು ಕೊಡುತ್ತದೆ? 1 ಕೊರಿಂಥ 7:12–15 ಮತ್ತು 1 ಪೇತ್ರ 3:1,2.

ಕ್ರೈಸ್ತ ದಾಂಪತ್ಯದ ಪಾಲುಗಾರರಿಗಿರುವ ಆಶೀರ್ವಾದಗಳು : ಒಂದನೇ ಕೊರಿಂಥದಲ್ಲಿ ಪೌಲನು ಕ್ರೈಸ್ತ ಮತಕ್ಕೆ ಪರಿವರ್ತನೆಗೊಂಡವರಿಗೆ ಸಂಬಂಧಪಟ್ಟ ವಿಷಯಗಳಿಗೆ ಉತ್ತರಿಸುತ್ತಾನೆ.

ಕ್ರೈಸ್ತನಂಬಿಕೆ ಇಲ್ಲದವರ ಜೊತೆ ಸೇರಿ ಇಜ್ಜೋಡಾಗುವುದು ದೇವರಿಗೆ ಅಪರಾಧವಾಗುತ್ತದೆ ಅಥವಾ ದಾಂಪತ್ಯವೂ ದಾಂಪತ್ಯದಿಂದ ಹುಟ್ಟುವ ಮಕ್ಕಳ ಅಶುದ್ಧರಾಗುತ್ತಾರೆ. ಆದರೆ ಪೌಲನು ಇದು ಹಾಗಲವೆಂದು ಹೇಳುತ್ತಾನೆ. ವಿವಾಹದ ಪಾವಿತ್ರ್ಯ ಸ್ಥಿತಿ ಮತ್ತು ಅದರ ಆಪ್ತತೆಯು ದಾಂಪತ್ಯದಲ್ಲಿ ಪಾಲುಗಾರರಾದವರು ಪರಿವರ್ತನೆಯಾದನಂತರ ಮುಂದುವರೆಯುತ್ತದೆ.

ಒಂದು ಕ್ರೈಸ್ತದಾಂಪತ್ಯದಲ್ಲಿ ಪಾಲುಗಾರನಾದವನ ಇರುವಿಕೆಯು ಮತ್ತೊಬ್ಬ ಪಾಲುಗಾರನನ್ನು ದಾಂಪತ್ಯದಿಂದ ಹುಟ್ಟುವ ಮಕ್ಕಳನ್ನೂ ಪರಿಶುದ್ಧ ಪಡಿಸುತ್ತದೆ. ಈ ಪರಿಶುದ್ಧತೆಯೆನ್ನುವ ಪದವು ಕ್ರೈಸ್ತ ನಂಬಿಕೆ ಇಲ್ಲದ ಬಾಳಸಂಗಾತಿಯು ನಂಬಿಕೆ ಇರುವ ಸಂಗಾತಿಯೊಂದಿಗೆ ಸೇರಿ ಕೃಪೆಯ ಆಶೀರ್ವಾದಗಳನ್ನು ಅನುಭವಿಸುವುದು.

ಒಮ್ಮೊಮ್ಮೆ ಕ್ರಿಸ್ತನಂಬಿಕೆ ಇಲ್ಲದ ವ್ಯಕ್ತಿಯು ವಿವಾಹ ಬಂಧನವನ್ನು ತ್ಯಜಿಸುವ ತೀರ್ಮಾನವನ್ನು ತೆಗೆದುಕೊಂಡಾಗ ಹೃದಯವಿದ್ರಾವಕ ಪರಿಸ್ಥಿತಿ ಉಂಟಾಗುತ್ತದೆ. ಇದರಿಂದ ಉಂಟಾಗುವ ಪರಿಣಾಮಗಳು ಬಹಳ ಗಂಭೀರವಾದದ್ದಾಗಿದ್ದರೂ ದೇವರ ಕರುಣೆ ತುಂಬಿದ ಮನುಷ್ಯನ ಆಯ್ಕೆಯ ಸ್ವಾತಂತ್ರವನ್ನು ಎತ್ತಿಹಿಡಿಯುತ್ತವೆ. ಕ್ರಿಸ್ತನಂಬಿಕೆಯಿಲ್ಲದವನು ಅಗಲ ಬೇಕೆಂದಿದ್ದರೆ ಅಗಲಿ ಹೋಗಲಿ ಇಂಥಾ ಸಂದರ್ಭಗಳಲ್ಲಿ ಕ್ರೈಸ್ತ ಸಹೋದರನಾಗಲೀ ಸಹೋದರಿಯಾಗಲೀ ಬದ್ಧರಲ್ಲ (1 ಕೊರಿಂಥ 7:15).

ಸಮಾಧಾನವಾಗಿ ಜೀವಿಸುವುದಕ್ಕೆ ಕರೆಯಲ್ಪಟ್ಟಿದ್ದಾರೆ. ಕುಟುಂಬವನ್ನು ಆಧ್ಯಾತ್ಮಿಕವಾಗಿ ವಿಭಾಗಿಸುವ ಸವಾಲುಗಳಿರುವಾಗ ದೇವರ ವಾಕ್ಯದ ಸ್ಪಷ್ಟವಾದ ಆದ್ಯತೆಯು, ಕ್ರಿಸ್ತ ಸಮಾಧಾನವು ಕುಟುಂಬವನ್ನು ಆಳುವ ದಾರಿಯನ್ನು ಕಂಡುಕೊಳ್ಳುತ್ತದೆ. ಮದುವೆಯ ಸಂಬಂಧ ಹಾನಿಯಾಗದ ಹಾಗೆ ಇಟ್ಟುಕೊಳ್ಳುವ ನಿರೀಕ್ಷೆ ಯಾವುದೆಂದರೆ ಕಷ್ಟ ಸಮಸ್ಯೆಗಳ ನಡುವೆಯೂ ಸುವಾರ್ತೆಯು ಕೊಡುವ ಜಯದ ಸಾಕ್ಷಿ ಮತ್ತು ಒಂದೇ ಶರೀರವಾಗುವುದಕ್ಕೆ ಕೊಟ್ಟಿರುವ ಸಂಗಾತಿಯೊಂದಿಗೆ ಸಮಾಧಾನವನ್ನು ಉತ್ತೇಜಿಸುವುದು.

ಒಬ್ಬ ಕ್ರಿಸ್ತನಂಬಿಕೆಯಿಲ್ಲದ ಜೀವನ ಸಂಗಾತಿಯ ವಿಷಯದಲ್ಲಿ ನಂಬಿಕೆಯಿರುವ ವ್ಯಕ್ತಿಯ ಜವಾಬ್ದಾರಿಗೆ ಯಾವ ಪರಿಮಿತಿಗಳಿವೆ. ದಯೆಯುಳ್ಳ ಪ್ರೀತಿ, ಅಚಲವಾದ ನಿಷ್ಠೆ, ದೀನತೆಯ ಸೇವೆ ಮನಸೆಳೆದ ಸಾಕ್ಷಿ ಇರುವ ಕ್ರಿಸ್ತನಂಬಿಕೆಯಿರುವವರು ತನ್ನ ಕ್ರಿಸ್ತನಂಬಿಕೆಯಿಲ್ಲದ ಸಂಗಾತಿಯನ್ನು ಗೆಲ್ಲುವ ಮಹಾಸಂಭವವನ್ನುಂಟು ಮಾಡುತ್ತದೆ. ಕ್ರೈಸ್ತ ವಿವಾಹದಲ್ಲಿ ಅಧೀನತೆಯು ಕ್ರಿಸ್ತನ ಮೇಲಿನ ಭಕ್ತಿಯೊಂದಿಗೆ ಹುಟ್ಟುತ್ತದೆ (ಎಫೆಸ 5:21ರ ಜೊತೆ ಹೋಲಿಸಿರಿ). ಕ್ರೈಸ್ತ ನಂಬಿಕೆಯಿರುವ ಸಂಗಾತಿಯು ತನ್ನ ಕ್ರೈಸ್ತೀಯ ವಿಧೇಅತೆಯಿಂದ ನಂಬಿಕೆಯಿಲ್ಲದ ಸಂಗಾತಿಯೊಂದಿಗೆ ಸಂಬಂಧ ಹೊಂದಿರುವಾಗ ಮೊದಲ ನಿಷ್ಠೆಯನ್ನು ಯಾವಾಗಲೂ ಕ್ರಿಸ್ತನಿಗೆ ತೋರಿಸಬೇಕು.

ತಮ್ಮ ಜೀವಿತದಲ್ಲಿ ದೇವರಿಗೆ ನಂಬಿಗಸ್ತರಾದವರು ಬಲಾತ್ಕಾರಿಯಾದ ಮತ್ತು ನಂಬಿಕೆಯಿಲ್ಲದ ಜೀವನ ಸಂಗಾತಿಯ ಕೈಯಿಂದ ಶೋಷಣೆಯನ್ನು ಅನುಭವಿಸುವ ಅಗತ್ಯವಿರುವುದಿಲ್ಲ.

ನಿಮ್ಮ ಸಭೆಯಲ್ಲಿ ಯಾರಾದರೂ ಕ್ರಿಸ್ತನಂಬಿಕೆಯಿಲ್ಲದ ಸಂಗಾತಿಯೊಡನೆ ಕಷ್ಟಪಡುತ್ತಿರುವರೇ? ಒಂದು ವೇಳೆ ಹೌದಾದರೆ ನಿಜಜೀವನದಲ್ಲಿ ಯಾವ ರೀತಿಯಾಗಿ ಅಂಥವರಿಗೆ ಸಹಾಯ ಮಾಡಬಹುದು?

**ಬುಧವಾರ** **ಜೂನ್ 19**

## ಕೌಟುಂಬಿಕ ಜೀವನವು ಹಂಚಿಕೊಳ್ಳುವುದಕ್ಕಾಗಿ ಇದೆ

ಕೆಳಗಿನ ವಚನಗಳಲ್ಲಿ ಅನುಸರಿಸಿರಿ ಅಥವಾ ಅನುಕರಣೆ ಮಾಡಿರಿ ಎಂಬ ಪದಗಳನ್ನು ಪತ್ತೆ ಮಾಡಿರಿ. ಕ್ರೈಸ್ತನಾಗುವ ಅಥವಾ ಕ್ರೈಸ್ತನಾಗಿ ಬೆಳೆಯುವ

ಪ್ರಕ್ರಿಯೆಯ ಬಗ್ಗೆ ನಮಗೆ ಏನನ್ನು ಹೇಳುತ್ತದೆ? ಮಾದರಿಯ ಜೀವಿತಕ್ಕೂ ಅದರ ಸಾಕ್ಷಿಗೂ ಯಾವ ಸಂಬಂಧವನ್ನು ಸೂಚಿಸುತ್ತದೆ?

1 ಕೊರಿಂಥ 4:16; ಎಫೆಸ 5:1 ಮತ್ತು 1 ಥೆಸ 1:6, ಇಬ್ರಿಯ 6:12, 13:7 ಮತ್ತು 3ನೇ ಯೋಹಾನ 11. ಹೊಸ ಒಡಂಬಡಿಕೆಯಲ್ಲಿ ಒತ್ತಿ ಹೇಳುವ 'ಅನುಸರಣೆ' ಪದವು ಕಲಿಯುವ ಪ್ರಕ್ರಿಯೆಯಲ್ಲಿ ಮಾದರಿಯ ವಹಿಸುವ ಪ್ರಮುಖ ಪಾತ್ರವನ್ನು ಒಪ್ಪಿಕೊಳ್ಳುತ್ತದೆ, ಜನರು ಏನನ್ನು ಮತ್ತು ಯಾರನ್ನು ವೀಕ್ಷಿಸುತ್ತಾರೋ ಅದರಂತೆ ಆಗುತ್ತಾರೆ. ಈ ತತ್ವವು ಸಾಮಾನ್ಯವಾಗಿ ಮತ್ತು ವಿಶೇಷವಾಗಿ ಕುಟುಂಬದ ಸಂಬಂಧಗಳಿಗೆ ಅನ್ವಯವಾಗುತ್ತದೆ.

ಇಲ್ಲಿ (ಕುಟುಂಬದಲ್ಲಿ) ಅನುಕರಣೆ ಸರ್ವೇ ಸಾಮಾನ್ಯವಾಗಿರುತ್ತದೆ. ಕುಟುಂಬದಲ್ಲಿ ಮಕ್ಕಳು ತಮ್ಮ ತಂದೆ ತಾಯಿಗಳನ್ನು ಮತ್ತು ತಮ್ಮ ಒಡಹುಟ್ಟಿದವರನ್ನು ಅನುಸರಿಸುತ್ತಾರೆ. ಮದುವೆಯಾದ ದಂಪತಿಗಳು (ಗಂಡ ಹೆಂಡತಿಯರು) ಪರಸ್ಪರ ಒಬ್ಬರನ್ನೊಬ್ಬರು ಅನುಕರಿಸುತ್ತಾರೆ. ಈ ಪರಿಕಲ್ಪನೆಯು ಹೇಗೆ ದಂಪತಿಗಳು ಮತ್ತು ಕುಟುಂಬಗಳು ಇತರ ದಂಪತಿಗಳಿಗೆ ಮತ್ತು ಕುಟುಂಬಗಳಿಗೆ ಸಾಕ್ಷಿ ಕೊಡುತ್ತವೆ ಎಂಬುದಕ್ಕೆ ಮುಖ್ಯವಾದ ಸುಳಿವಾಗಿವೆ. ಸಾಮಾಜಿಕ ಪ್ರಭಾವದ ಶಕ್ತಿ : ಇತರರಿಗೆ ನಮ್ಮನ್ನು ನೋಡುವ ಅವಕಾಶಗಳನ್ನು ಕೊಟ್ಟು ನಮ್ಮ ಮನೆಯ ಅನುಭವಗಳನ್ನು ಒಂದಲ್ಲಾ ಒಂದು ರೀತಿಯಾಗಿ ಹಂಚಿಕೊಳ್ಳುವುದರಿಂದ ನಾವು ನಮ್ಮ ಮನೆಯ (ಕುಟುಂಬದ) ಮೂಲಕವೂ ಇತರರಿಗೆ ಸಾಕ್ಷಿಗಳಾಗಿರಬಹುದು. ಅನೇಕರು ತಮ್ಮ ಮದುವೆಯ ಅಥವಾ ಕೌಟುಂಬಿಕ ಸಂಬಂಧಗಳ ವಿಷಯದಲ್ಲಿ ಉತ್ತಮವಾದ ಉದಾಹರಣೆಯಾಗಿ ಇರುವುದಿಲ್ಲ. ಅನ್ಯರು (ಇತರರು) ನಮ್ಮ ಮನೆಯಲ್ಲಿ ಕ್ರಿಸ್ತನ ಆತ್ಮವಿರುವುದನ್ನು ನೋಡಿದಾಗ ವ್ಯತ್ಯಾಸವು ಆಗುತ್ತದೆ. ಸಾಮಾಜಿಕ ಪ್ರಭಾವವು ಅದ್ಭುತಕರವಾದ ಪ್ರಭಾವವಾಗಿದೆ ಎಂಬುದಾಗಿ ವೈಟಮ್ಮನವರು ಬರೆಯುತ್ತಾರೆ. ನಾವು ಅದನ್ನು ಮತ್ತೊಬ್ಬರಿಗೆ ಸಹಾಯ ಮಾಡುವ ಸಾಧನವಾಗಿ ಉಪಯೋಗಿಸಬಹುದು– ದಿ ಮಿನಿಸ್ಟ್ರಿ ಆಫ್ ಹೀಲಿಂಗ್, ಪುಟ 354.

ವಿವಾಹವಾದ ದಂಪತಿಗಳು ಬೇರೆ ದಂಪತಿಗಳನ್ನು ಆಹ್ವಾನಿಸಿ ಅವರೊಟ್ಟಿಗೆ ಸತ್ಯವೇದವನ್ನು ಅಧ್ಯಯನ ಮಾಡುವಾಗ ಅಥವಾ ದಾಂಪತ್ಯ ಜೀವನಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳಿಗೆ ಒಟ್ಟಾಗಿ ಹಾಜರಾದಾಗ ನಮ್ಮನ್ನು ಸಂದರ್ಶಿಸಲು ಬಂದವರು ಒಂದು "ಮಾದರಿ"ಯನ್ನು ನೋಡುತ್ತಾರೆ.

ಪರಸ್ಪರ ಪ್ರೀತಿಯ ಅನುಭವ ದೃಢವಾದ ಹೇಳಿಕೆ, ಸಂವಹನ (ಮಾತುಕತೆ) ಘರ್ಷಣೆಯನ್ನು ವಿರೋಧಿಸುವ ನಿರ್ಧಾರ, ವ್ಯತ್ಯಾಸಗಳನ್ನು (ಈರ್ವರಲ್ಲಿಯೂ ಇರುವ ಭಿನ್ನತೆ) ಇರಿಸಿಕೊಂಡೇ ಒಂದಾಗಿರುವುದು ಇವೆಲ್ಲವನ್ನು ನಮ್ಮ ಜೀವಿತದಲ್ಲಿ ಪ್ರದರ್ಶನ ಮಾಡಿದಾಗ ಕ್ರಿಸ್ತನಲ್ಲಿ ನೆಲೆಯಾಗಿರುವ ಕೌಟುಂಬಿಕ ಜೀವನದ ಬಗ್ಗೆ ಸಾಕ್ಷಿ ಕೊಡುತ್ತವೆ. ಈ ಹಿನ್ನೆಲೆಯಲ್ಲಿ ಯಾವುದರ ವಿಷಯ ನಾವು ಯಾವಾಗಲೂ ಜಾಗರೂಕರಾಗಿರಬೇಕು? ಯೆರೆ 17:9, ಯೋಹಾನ 2:25, ರೋಮ 3:23.

ಯಾರು ಕ್ರಿಸ್ತನನ್ನು ಅನುಸರಿಸುತ್ತಾರೋ ಅವರನ್ನು ನಾವು ಅನುಸರಿಸಬೇಕು. ಮನುಷ್ಯರ ಉದಾಹರಣೆ ಯಾವಾಗಲೂ ಕುಂದುಳ್ಳದ್ದು, ಹಾಗಾಗಿ ಕ್ರೈಸ್ತ ಕುಟುಂಬವು ಸಂಪೂರ್ಣವಾದ ಮಾದರಿಯನ್ನು ಕೊಡಲಾರದಾಗಿರುತ್ತದೆ.

ಇದರಲ್ಲಿರುವ ಕಲ್ಪನೆ ಏನೆಂದರೆ ಜನರು ತಮ್ಮಂತೆಯೇ ಮನುಷ್ಯರಾಗಿದ್ದು ತಪ್ಪು ಮಾಡುವವರಾಗಿದ್ದಾಗ್ಯೂ ತಮ್ಮ ಜೀವಿತದಲ್ಲಿ ಕ್ರೈಸ್ತೀಯನ ನಂಬಿಕೆಯನ್ನು ಪ್ರದರ್ಶನ ಮಾಡುವಾಗ ಅದನ್ನು ನೋಡಿದ ವ್ಯಕ್ತಿಯು ಗ್ರಹಿಸಿಕೊಳ್ಳುವವ–ರಾಗಿರುತ್ತಾನೆ.

ನಿಮ್ಮ ಮನೆಯು ಕ್ರೈಸ್ತೀಯ ಸಾಕ್ಷಿಕೊಡುವಂತಹ ಒಂದು ಉತ್ತಮವಾದ ಮಾದರಿಯನ್ನಾಗಿ ಮಾಡುವುದಕ್ಕೆ ನೀವೇನು ಮಾಡುವಿರಿ?

**ಗುರುವಾರ** **ಜೂನ್ 20**

## ಸ್ನೇಹವನ್ನು ಹರಡುವ ಕೇಂದ್ರಗಳು

ಅತಿಥಿ ಸತ್ಕಾರವನ್ನು ಉಲ್ಲೇಖಿಸುವ (ಕುರಿತು ಹೇಳುವ) ಸತ್ಯವೇದ ವಚನಗಳನ್ನು ಈ ಕೆಳಗೆ ಪಟ್ಟಿ ಮಾಡಿರುವ ಸತ್ಯವೇದದ ನಿಜಸಂದರ್ಭಗಳಿಗೆ

ಹೋಲಿಸಿರಿ. ಯೆಶಾಯ 58:6,7 10–12; ರೋಮ 12:13 ಮತ್ತು 1 ಪೇತ್ರ 4:9 ಇಲ್ಲಿ ಪ್ರದರ್ಶಿತವಾಗಿರುವ ಸತ್ಕಾರದ ಗುಣಗಳನ್ನು ಗಮನಿಸಿರಿ.

ಅಬ್ರಹಾಮ ಮತ್ತು ಸಾರಳು : (ಆ.ಕಾಂಡ 18:1–8)
ರೆಬೆಕ್ಕಾ ಮತ್ತು ಕುಟುಂಬ : (ಆ.ಕಾಂಡ 24:15–20, 31–33)
ಜಕ್ಕಾಯ (ಲೂಕ 9:1–9) ........

ಸತ್ಕಾರವು ಮತ್ತೊಬ್ಬ ವ್ಯಕ್ತಿಯ ಅಗತ್ಯತೆಗಳನ್ನು ಅಂದರೆ ವಿಶ್ರಾಂತಿ, ಆಹಾರ ಮತ್ತು ಅನ್ಯೋನ್ಯತೆ ಇವುಗಳನ್ನು ಪೂರೈಸುತ್ತದೆ. ಸತ್ಕಾರವು ನಿಸ್ವಾರ್ಥ ಪ್ರೀತಿಯನ್ನು ಅನುಭವಕ್ಕೆ ತರುತ್ತದೆ. ಯೇಸುಕ್ರಿಸ್ತನು ಸತ್ಕಾರಕ್ಕೆ ತತ್ವಪೂರ್ವಕವಾದ ಮಹತ್ವವನ್ನು ಕೊಟ್ಟಿದ್ದಾನೆ. ಹಸಿದವರಿಗೆ ಊಟಕೊಟ್ಟರೆ ಬಾಯಾರದವರಿಗೆ ನೀರು ಕೊಟ್ಟರೆ. ಅದು ನನಗೆ ಮಾಡಿದ ಹಾಗಾಯ್ತು ಎಂದು ಹೇಳುತ್ತಾನೆ (ಮತ್ತಾಯ 25:34–40).

ಒಬ್ಬರ ಮನೆಯನ್ನು ಸುವಾರ್ತೆ ಸೇವೆಗೆ ಉಪಯೋಗಿಸುವಾಗ ಅಥವಾ ಶೋಷಣೆಗೆ ಒಳಗಾದ ವ್ಯಕ್ತಿಗೆ ಮನೆಯಲ್ಲಿ ತಂಗುವುದಕ್ಕೆ ಪ್ರತ್ಯೇಕವಾಗಿ ಕೋಣೆಯೊಂದನ್ನು ಬಿಟ್ಟುಕೊಡುವಂಥದ್ದಾಗಿರಬಹುದು. ಇದು ಕೇವಲ ಸ್ನೇಹಪೂರ್ವಕವಾದ ಸತ್ಕಾರವಾಗಿದ್ದು ಮತ್ತೊಬ್ಬರ ಜೊತೆ ಪ್ರಾರ್ಥನೆಯನ್ನು ಮಾಡುವ ಅವಕಾಶವನ್ನು ಒದಗಿಸಬಹುದು ಅಥವಾ ಒಟ್ಟಿಗೆ ಸೇರಿ ಸತ್ಯವೇದಾಧ್ಯಯನ ಮಾಡುವುದಕ್ಕಾಗಿ ಅವರನ್ನು ಸತ್ಕರಿಸಬಹುದು.

ಯಾರು ದೇವರ ಪ್ರೀತಿಯಿಂದ ಪ್ರೇರಿತವಾಗಿ ತಮ್ಮ ಪ್ರೀತಿಯನ್ನು ಮಾತುಗಳಿಂದಲೂ ಕ್ರಿಯೆಗಳಿಂದಲೂ ವ್ಯಕ್ತಪಡಿಸುತ್ತಾರೋ ಅವರ ಹೃದಯಗಳಲ್ಲಿ ಸತ್ಕಾರವು ಚಿಲುಮೆಯಂತೆ ಚಿಮ್ಮುತ್ತದೆ.

ಕೆಲವು ಸಲ ಕುಟುಂಬಗಳು ಸತ್ಕಾರ ಮಾಡುವುದಕ್ಕೆ ಸಾಕಷ್ಟು ಅನುಕೂಲತೆಗಳು, ಸಮಯ, ಸಾಮರ್ಥ್ಯ ಇಲ್ಲವೆಂದು ಹೇಳುತ್ತವೆ. ಅನೇಕರು ತಮಗೆ ಪರಿಚಯವಾದವರನ್ನು ಮಾತ್ರ ಸತ್ಕರಿಸುತ್ತಾರೆ. ಪರಿಚಯವಿಲ್ಲದವರನ್ನು ಅವಿಶ್ವಾಸಿಗಳನ್ನೂ ಸತ್ಕರಿಸುವಾಗ ಮುಜುಗರ ಪಡುತ್ತಾರೆ. ಕೆಲವರು

ಮತ್ತೊಬ್ಬರೊಂದಿಗೆ ಬೆರೆಯುವಾಗ ಸಮಸ್ಯೆಗಳುಂಟಾಗುತ್ತವೆಯೆಂದು ಸತ್ಕರಿಸಲು ಇಷ್ಟಪಡುವುದಿಲ್ಲ. ಅನೇಕ ಸಮಕಾಲೀನ ಕುಟುಂಬಗಳು (ಇಂದಿನ ಕಾಲದ ಕುಟುಂಬಗಳು) ಸತ್ಕಾರಕ್ಕೂ ರಂಜನೆಗೂ ಇರುವ ವ್ಯತ್ಯಾಸವನ್ನರಿಯದೆ ಗೊಂದಲಕ್ಕೀಡಾಗುತ್ತಾರೆ.

ನಿಮ್ಮ ಕೌಟುಂಬಿಕ ಜೀವನವು ನಿಮ್ಮ ಆತ್ಮೀಕ ಪರಿಸ್ಥಿತಿಯನ್ನು ಯಾವ ರೀತಿಯಲ್ಲಿ ಪ್ರತಿಬಿಂಬಿಸುತ್ತದೆ?

**ಶುಕ್ರವಾರ** **ಜೂನ್ 21**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟ್‌ರವರ (1) A powerful christian witness' PP 35-39. (2) Attitude towards unbelieving companion - PP 348-352. The Advenitst Home (3) Ministry of the Home PP 349-355. Ministry of Healing. (4) The Ambssadors from Babylon, PP 340-348 - Prophets and Kings.

ಸುವಾರ್ತಾಕಾರ್ಯದಲ್ಲಿ ಕೌಟುಂಬಿಕಶಕ್ತಿ : ದೊಡ್ಡ ಪ್ರಸಂಗಕ್ಕಿಂತಲೂ ಸತ್ಯವಾದ ಕುಟುಂಬವು ಮನುಷ್ಯರ ಹೃದಯ ಮತ್ತು ಜೀವಿತಗಳ ಮೇಲೆ ದೊಡ್ಡ ಪ್ರಭಾವವನ್ನು ಬೀರುತ್ತದೆ.

ನಮ್ಮ ಪ್ರಭಾವ ವಲಯವು ಬಹಳ ಕಿರಿದೆಂದು ಎನಿಸಬಹುದು, ನಮಗಿರುವ ಸಾಮರ್ಥ್ಯ ಚಿಕ್ಕದಾಗಿರಬಹುದು, ಅವಕಾಶಗಳು ಕೆಲವೇ ಆಗಿರಬಹುದು. ನಮ್ಮ ಗ್ರಹಿಕೆ (ಜ್ಞಾನ) ಮಿತಿಯುಳ್ಳದ್ದಾಗಿರಬಹುದು. ಆದಾಗ್ಯೂ ನಮ್ಮ ಮನೆಯ "ನಂಬಿಗಸ್ತ ಅವಕಾಶಗಳ" ಮೂಲಕ ಅದ್ಭುತವಾದ ಸಾಧ್ಯತೆಗಳು ನಮಗೆ ಆಗಬಹುದು– ಎಲೆನ್ ವೈಟ್‌ರವರ ಮಿನಿಸ್ಟ್ರಿ ಆಫ್ ಹೀಲಿಂಗ್ ಪುಸ್ತಕ ಪುಟ 352–355.

## ಚರ್ಚಿಸಬೇಕಾದ ಪ್ರಶ್ನೆಗಳು

1. ಮತ್ತೊಂದು ಕುಟುಂಬದ ಪ್ರಭಾವದಿಂದ ಕ್ರಿಸ್ತನಿಗೋಸ್ಕರ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಯಿತೆಂದು ಹೇಳುವವರು ನಿಮ್ಮ

ತರಗತಿಯಲ್ಲಿದ್ದಾರೆಯೆ ಕೇಳಿರಿ. ಯಾವ ವಿಷಯವು ಅವರನ್ನು ಪ್ರಭಾವಿಸಿತು. ಇದರಿಂದ ತರಗತಿ ಏನನ್ನು ಕಲಿಯಬಹುದು ಚರ್ಚೆ ಮಾಡಿರಿ.

2. ಕ್ರಿಸ್ತ ನಂಬಿಕೆಯಿಲ್ಲದ ಸಂಗಾತಿಯೊಡನೆ ಜೀವಿಸುತ್ತಿರುವ ಕುಟುಂಬಕ್ಕೆ ನೀವು ಹೇಗೆ ನಿಜಜೀವನದಲ್ಲಿ ಸಹಾಯ ಮಾಡಬಲ್ಲಿರಿ?

3. ತರಗತಿಯಾಗಿ ನಂಬಿಕೆಗೆ ವಿರೋಧವಾಗಿ ಕೆಲಸ ಮಾಡುವ ಒತ್ತಡಗಳ ಬಗ್ಗೆ ಮಾತಾಡಿರಿ ನಂತರ ಸಾಧ್ಯವಾದ ಪರಿಹಾರಗಳನ್ನು ಸೂಚಿಸಿ ತರಗತಿಯಲ್ಲಿ ಪಟ್ಟಿ ಮಾಡಿರಿ.

4. ಕ್ರೈಸ್ತರ ಖಾಸಗಿ ಜೀವನವು ಮಕ್ಕಳಿಗೆ ನಂಬಿಕೆಯಿಲ್ಲದ ಬಾಳಸಂಗಾತಿಗಳಿಗೆ ಇತರೆ ಸಂಬಂಧಿಕರಿಗೆ ಮತ್ತು ಸಂದರ್ಶಕರಿಗೆ ಸಾಕ್ಷಿಕೊಡುವ ಮಾಧ್ಯಮಗಳಾಗಿವೆ.

ಮನೆಯಲ್ಲಿ ನಂಬಿಕೆಯನ್ನು ಹಂಚಿಕೊಳ್ಳುವಾಗ ಅದು ಪರಿಪೂರ್ಣವಾಗದಿರ–ಬಹುದು. ಅದರಿಂದ ನಂಬಿಕೆಯಿಲ್ಲದವರು, ಸಂಬಂಧಿಗಳು, ಸಂದರ್ಶಕರು ಕ್ರೈಸ್ತತ್ವಕ್ಕೆ ಪರಿವರ್ತನೆಗೊಳ್ಳದಿರಬಹುದು. ಅಪರಿಪೂರ್ಣರಾದ ಕುಟುಂಬದ ಸದಸ್ಯರು ಪರಿಪೂರ್ಣನಾದ ಕ್ರಿಸ್ತನೆಡೆಗೆ ನಡೆಸುವ ದಾರಿಯುನ್ನು ಬಯಸುವವರಾಗಿರುತ್ತಾರೆ. ಅವರು ಮುಟ್ಟಿದ ಎಲ್ಲಾ ವ್ಯಕ್ತಿಗಳನ್ನು ಕ್ರಿಸ್ತನ ಕೃಪೆಯ ರಾಜ್ಯಕ್ಕೆ ಕರೆದುಕೊಂಡು ಬರುತ್ತಾರೆ. ನಿಮ್ಮ ಮನೆಯನ್ನು ಸಂದರ್ಶಿಸಲು ಬರುವವರ ಮೇಲೆ ನಿಮ್ಮ ಮನೆಯು ಹೇಗೆ ಪ್ರಭಾವ ಬೀರುತ್ತದೆ, ಆಲೋಚಿಸಿರಿ? ನಿಮ್ಮ ಮನೆಯೊಳಗೆ ಪ್ರವೇಶಿಸುವವರೆಲ್ಲರಿಗೂ ಕ್ರಿಸ್ತನಂಬಿಕೆಯ ವಿಷಯದಲ್ಲಿ ಉತ್ತಮವಾದ ಸಾಕ್ಷಿಯನ್ನು ನೀಡುವುದಕ್ಕೆ ನೀವೇನು ಮಾಡುವಿರಿ?